# ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ, ಗೌರಿಬಿದನೂರು ಟೌನ್, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

| | |
|---|---|
| ಪ್ರಾರಂಭವಾದ ವರ್ಷ ಮತ್ತು ದಿನಾಂಕ | 2018–19 ದಿನಾಂಕ:01–06–2018 |
| ಸರ್ಕಾರಿ ಆದೇಶ ಸಂಖ್ಯೆ | ಎಂಡಬ್ಲ್ಯೂಡಿ 204 ಎಂಡಿಎಸ್ 2017, ದಿನಾಂಕ:20–06–2017 |
| ಕಟ್ಟಡದ ವಿಸ್ತೀರ್ಣ | 12×10=120 ಅಡಿ 120×2=240 ಅಡಿಗಳು |
| ವಸತಿ ಶಾಲೆಯ ಅಕ್ಷಾಂಶ ಮತ್ತು ರೇಖಾಂಶ | Lat:13.61712, Lng:77.51799 |
| ಮಂಜೂರಾತಿಯಾದ ವಿದ್ಯಾರ್ಥಿಗಳ ಸಂಖ್ಯೆ | 180 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 57 |
| ನಡೆಯುತ್ತಿರುವ ತರಗತಿಗಳು | 6ನೇ ತರಗತಿಯಿಂದ 8ನೇ ತರಗತಿಯವರೆಗೆ |
| ಮಾಧ್ಯಮ | ಆಂಗ್ಲ |




## :: ವಿವರಣೆ ::

ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಹಾಗೂ ಖ್ಯಾತ ಶಿಕ್ಷಣ ತಜ್ಞರು ಆದ ಹೆಚ್.ಎನ್. ನರಸಿಂಹಯ್ಯನವರ ಜನ್ಮ ಭೂಮಿಯಾದ ಗೌರಿಬಿದನೂರು ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯ ವತಿಯಿಂದ 2018–19ನೇ ಸಾಲಿನಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆ (ಆಂಗ್ಲ ಮಾಧ್ಯಮ) ಯು ಇಡಗೂರು ರಸ್ತೆಯ ವೀರಂಡನಹಳ್ಳಿಯಲ್ಲಿನ ಸರ್ಕಾರಿ ಶಾಲೆಯ ಕಟ್ಟಡದಲ್ಲಿ ಕಾರ್ಯಾರಂಭಗೊಂಡಿರುತ್ತದೆ. ಪ್ರಸ್ತುತ 6ನೇ ತರಗತಿಯಿಂದ 8ನೇ ತರಗತಿಯವರೆಗೆ ಗಂಡು ಹಾಗೂ ಹೆಣ್ಣು ಮಕ್ಕಳ ಸಹಶಿಕ್ಷಣವಾಗಿ ಉತ್ತಮವಾದ ಬೋಧನಾ ಪರಿಸರವನ್ನು ಹೊಂದಿದೆ. ಅಲ್ಪಸಂಖ್ಯಾತ ವಿದ್ಯಾರ್ಥಿಗಳಾದ ಮುಸ್ಲಿಂ, ಕ್ರೈಸ್ತ, ಬೌದ್ಧ, ಪಾರ್ಸಿ, ಸಿಖ್, ಜೈನ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಶೇ 75 ರಂತೆ ಇನ್ನಿತರ ವಿದ್ಯಾರ್ಥಿಗಳಾದ ಹಿಂದುಳಿದ ಮತ್ತು ಸಾಮಾನ್ಯ ವಿದ್ಯಾರ್ಥಿಗಳಿಗೆ ಶೇ. 25 ರಂತೆ ಪ್ರವೇಶಾತಿಯನ್ನು ನೀಡುತ್ತಿದೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತಮವಾದ ಶಿಕ್ಷಣವನ್ನು ತಲುಪಿಸಲು ನುರಿತ ಶಿಕ್ಷಕರು ಇದ್ದು, ತಾಲ್ಲೂಕಿನ ಸುತ್ತಮುತ್ತ ಇರುವ ಹಳ್ಳಿಗಳಲ್ಲಿ ಶೈಕ್ಷಣಿಕ ವಂಚಿತ ಬಡ ವಿದ್ಯಾರ್ಥಿಗಳಿಗೆ ಶಾಲೆಯ ಬಗ್ಗೆ ಪ್ರಚಾರವನ್ನು ನೀಡಿ ವಿದ್ಯಾರ್ಥಿಗಳು ಶಿಕ್ಷಣವನ್ನು ಒಲವಿನಿಂದ ಕಲಿಯಲು ಬರುವಂತೆ ಮಾಡಿರುವರು. ಉತ್ತಮ ಹಾಗೂ ಉಚಿತ ಶಿಕ್ಷಣ ನೀಡುವುದರೊಂದಿಗೆ ಯಾವ ಖಾಸಗಿ ಶಿಕ್ಷಣಕ್ಕೂ ಕಡಿಮೆ ಇರದಂತೆ ಸಮವಸ್ತ್ರ, ಸ್ಟೇಷನರಿ ವಸ್ತುಗಳನ್ನು ನೀಡಿರುತ್ತೇವೆ. ಈ ಶಾಲೆಯು ನುರಿತ ಶಿಕ್ಷಕರಿದ್ದು, ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ರೂಪಿಸುವಲ್ಲಿ ಕಾರ್ಯೋನ್ಮುಖವಾಗಿದೆ.

ಈ ಶಾಲೆಯ ವಿದ್ಯಾರ್ಥಿ – ಶಿಕ್ಷಕರು – ಪೋಷಕರೊಂದಿಗಿನ ಉತ್ತಮ ಬಾಂಧವ್ಯದಿಂದಾಗಿ ಶಾಲೆಯು ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದುತ್ತಿರುವುದು. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರೊಂದಿಗೆ ಹಲವಾರು ಪ್ರಶಸ್ತಿಗಳನ್ನು ಗಳಿಸಿರುವರು. ಸಾರ್ವಜನಿಕ ಶಿಕ್ಷಣ ಇಲಾಖೆಯವರು ಆಯೋಜಿಸಿದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಮಹಮ್ಮದ್ ಅಕ್ರಂ ಎಂಬ ವಿದ್ಯಾರ್ಥಿ ಘಜಲ್ ಗಾಯನದಲ್ಲಿ ಮಿಸ್ಬಾ ಎಂಬ ವಿದ್ಯಾರ್ಥಿನಿ ಕಂಠ–ಪಾಠ ಸ್ಪರ್ಧೆಯಲ್ಲಿ ಮತ್ತು ಅರ್ಜುನ್ ಎಂಬ ವಿದ್ಯಾರ್ಥಿಯು ಮಣ್ಣಿನ ಕಲಾಕೃತಿಯಲ್ಲಿ ಉತ್ತಮ ಪ್ರತಿಭೆಯನ್ನು ಪ್ರದರ್ಶಿಸಿ ಪ್ರಶಸ್ತಿಗಳನ್ನು ಪಡೆದಿರುವರು. ಇದಲ್ಲದೆ ತರಗತಿಗಳಲ್ಲಿಯೂ ಸಹ ನಡೆಸುವ ಸಾಂಸ್ಕೃತಿಕ ವಿಭಾಗದಲ್ಲಿ ರಸಪ್ರಶ್ನೆ, ಆಶುಭಾಷಣ ಸ್ಪರ್ಧೆ, ಚಿತ್ರಕಲಾ ವಿಭಾಗದಲ್ಲೂ ಛಾಪನ್ನು ಮೂಡಿಸಿರುವರು. ಶೈಕ್ಷಣಿಕ ವರ್ಷದಲ್ಲಿನ ಎಲ್ಲಾ ರೀತಿಯ ದಿನಾಚರಣೆಯನ್ನು ಆಚರಿಸುವುದರೊಂದಿಗೆ ವಿದ್ಯಾರ್ಥಿಗಳು ಬೌದ್ಧಿಕ ಹಾಗೂ ಶಾರೀರಿಕ ವಿಕಾಸಕ್ಕೆ ಕಾರ್ಯತತ್ಪರರಾಗಿರುತ್ತಾರೆ. ಶಾಲೆಯ ಆವರಣದಲ್ಲಿ ಸುಂದರವಾದ ಹೂ ಗಿಡಗಳನ್ನು ನೆಡುವುದರೊಂದಿಗೆ ಶಾಲೆಯನ್ನು ಸ್ವಚ್ಛ ಹಾಗೂ ಸುಂದರಗೊಳಿಸಿರುವರು, ಇದಕ್ಕೆಲ್ಲಾ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಭಾರ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದದವರು ವಿದ್ಯಾರ್ಥಿಗಳು ಹಾಗೂ ಇಲಾಖೆಯ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳೇ ಕಾರಣ ಕರ್ತರು.